**ದಿನಾಂಕಃ 16.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ಚಕ್ರಪಾಣಿಯವರು ನನ್ನ ತಂದೆ. 1 ನೇ ಪ್ರತಿವಾದಿಯವರ ಪರಿಚಯವಿರುತ್ತದೆ. ತಿಪ್ಪಾಪುರ ಗ್ರಾಮದ ಸರ್ವೇ ನಂಬರ್ ನಲ್ಲಿ 1 ಎಕರೆ 20 ಗುಂಟೆ ಜಾಗವಿರುತ್ತದೆ. ಅದರ ಸರ್ವೇ ನಂಬರ್ ಗೊತ್ತಿಲ್ಲ. ಅದರ ಮೂಲ ಸರ್ವೇ ನಂ. 50 ಇರುತ್ತದೆ. ಅದರಲ್ಲಿ ಒಟ್ಟು ಎಷ್ಟು ಪೋಡಿಗಳಾಗಿರುತ್ತವೆ ಎಂದು ಗೊತ್ತಿಲ್ಲ. ನಮ್ಮ ತಂದೆಯವರು ಡಿ.ಎನ್.ಸುಬ್ರಮಣಿಯವರಿಗೆ 14 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ, ಅದರ ಸರ್ವೇ ನಂ. 50/1 ಆಗಿರುತ್ತದೆ ಎಂದರೆ ಸರಿ. ನಂತರ ಸುಬ್ರಮಣಿಯವರು ಆ ಜಾಗದಲ್ಲಿ ಸೈಟುಗಳನ್ನು ಮಾಡಿ ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಖರೀದಿದಾರರು ಯಾರೆಂದು ಗೊತ್ತಿಲ್ಲ. ಸರೋಜಮ್ಮರವರು ಚಾಂದ್ ಪಾಷಾರವರಿಗೆ ಮಾರಾಟ ಮಾಡಿದ ವ್ಯವಹಾರದಲ್ಲಿ ನಾನು ಭಾಗಿಯಾಗಿರುವುದಿಲ್ಲ. ಸರೋಜಮ್ಮರವರು 4 ಗುಂಟೆ ಜಾಗವನ್ನು ಗುಂಟೆ ಲೆಕ್ಕದಲ್ಲಿ ಮಾರಾಟ ಮಾಡಿರುತ್ತಾರೆ. ನಮ್ಮ ತಂದೆಯವರು ಸಹ ಸರೋಜಮ್ಮರವರಿಗೆ ಗುಂಟೆ ಲೆಕ್ಕದಲ್ಲಿಯೇ ಮಾರಾಟ ಮಾಡಿರುತ್ತಾರೆ. ಯಾವುದೇ ಅಳತೆಗಳನ್ನು ಮಾಡಿಸಿರುವುದಿಲ್ಲ.

ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ನಾನು ಅಳತೆಯ ಬಗ್ಗೆ ಹೇಳಿರುವುದಿಲ್ಲ. ಗುಂಟೆಯ ಲೆಕ್ಕದಲ್ಲಿ ಹೇಳಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಿಃ 25.02.2019 ಮತ್ತು 08.03.2019 ರಲ್ಲಿ ನಾನು ದಾವಾಸ್ವತ್ತಿನಲ್ಲಿ ಓಡಾಡಿರುವುದಿಲ್ಲ. ದಾವಾಸ್ವತ್ತಿನ ಸುತ್ತುಮುತ್ತಲೂ ನನ್ನ ಯಾವುದೇ ಆಸ್ತಿ ಇರುವುದಿಲ್ಲ. ದಾವಾಸ್ವತ್ತಿನ ಸಮೀಪವಿರುವ ರಸ್ತೆಯಲ್ಲಿ ಓಡಾಡುತ್ತೇನೆ, ಅದರ ಬಳಿ ಹೋಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಆದ ಗಲಾಟೆಯನ್ನು ನಾನು ನೋಡಿರುವುದಿಲ್ಲ, 1 ನೇ ಪ್ರತಿವಾದಿಯವರು ಹೇಳಿದ ಮೇರೆಗೆ ಸಾಕ್ಷಿ ನುಡಿದಿರುತ್ತೇನೆ. ನನಗೆ

ಸದರಿ ದಾವೆಯ ವಿಚಾರಗಳು ಏನು ಗೊತ್ತಿಲ್ಲದಿದ್ದರೂ ಸಹ 1 ನೇ ಪ್ರತಿವಾದಿಯವರು ಹೇಳಿದ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಗಲಾಟೆಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಂದ್ ಪಾಷಾ ಹಾಗೂ ಸರೋಜಮ್ಮರವರಿಗೂ ಮಾರಾಟ ಮಾಡಿದ ಸ್ವತ್ತು ಸರ್ವೇ ನಂ.50/2 ರಲ್ಲಿ ಇರುತ್ತದೆ ಎಂದರೆ 50/1 ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಸದರಿ ದಾವೆಯ ಕುರಿತು ವೈಯಕ್ತಿಕವಾದ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರಕ್ಕೆ ಸಹಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ** **ಇಲ್ಲ**

**ಮರು ವಿಚಾರಣೆಃ** **ಇಲ್ಲ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**